<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು</u>.

# <u>ಸ್ಪೆಷಲ್ ಕೇಸ್ ನಂಬ್ರ 124/2020</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಲೆಕ್ಸ್ ಐವನ್ ಸಿಕ್ವೇರಾ | <u>ಪ್ರಾ.ಸಾಃ 14</u> |
| ತಂದೆಯ ಹೆಸರು | : | ಪಾಸ್ಕಲ್ ಸಿಕ್ವೇರಾ | <u>ಚಾ.ಸಾಃ 24</u> |
| ಪ್ರಾಯ | : | 54 ವರ್ಷ | **<u>ದಿನಾಂಕಃ 26.10.2023</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪ್ರಾಂಶುಪಾಲರು, ಸೇಕ್ರೆಡ್ ಹಾರ್ಟ್ ಕಾಲೇಜು, ಮಡಂತ್ಯಾರು, ಬೆಳ್ತಂಗಡಿ ತಾಲೂಕು. | |
| ವಾಸಸ್ಥಳ | : | ಮಡಂತ್ಯಾರು, ಬೆಳ್ತಂಗಡಿ ತಾಲೂಕು. | |

<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>

ನಾನು 2012 ರಿಂದ 2020 ರವರೆಗೆ ಸೇಕ್ರೆಡ್ ಹಾರ್ಟ್ ಕಾಲೇಜು, ಮಡಂತ್ಯಾರು, ಬೆಳ್ತಂಗಡಿ ತಾಲೂಕು ಇಲ್ಲಿನ ಪ್ರಾಂಶುಪಾಲನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 24.12.2016 ರಂದು ಎಸಿಬಿ ಪೊಲೀಸರು ನನಗೆ ನೋಟೀಸು ನೀಡಿದ್ದು, ಅದರಂತೆ ಆರೋಪಿ ಗೋವಿಂದ ನಾಯ್ಕ ರವರಿಗೆ ಸಂಬಂಧಿಸಿದಂತೆ, ಅವರ ಮಗಳಾದ ಕು| ಚೈತ್ರಾ ನಮ್ಮ ಕಾಲೇಜಿನಲ್ಲಿ ಎಂ.ಕಾಂ. ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆಂದು, ಆಕೆಯ ಕಾಲೇಜು ಶುಲ್ಕದ ವಿವರವನ್ನು ನಮ್ಮಲ್ಲಿ ಕೇಳಿರುತ್ತಾರೆ. ಅದಕ್ಕ ಸಂಬಂಧಿಸಿದಂತೆ ನಾನು ಮಾಹಿತಿ ನೀಡಿದ್ದು, ಕು| ಚೈತ್ರಾ ಸರಕಾರಿ ಕೋಟಾದಡಿಯಲ್ಲಿ ಪ್ರವೇಶವನ್ನು ಪಡೆದಿರುತ್ತಾರೆ ಮತ್ತು ರೂ.11.875/- ಶುಲ್ಕವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪಾವತಿಸಿ ಬಂದಿರುತ್ತಾರೆ ಅಂತ ತಿಳಿಸಿರುತ್ತೇನೆ. ಅಲ್ಲದೆ ನಮ್ಮ ಕಾಲೇಜಿನಲ್ಲಿ ರೂ.1,190/- ನ್ನು ಪ್ರಥಮ ಸೆಮಿಸ್ಟರ್ ಪರೀಕ್ಷಾ ಶುಲ್ಕವನ್ನು ಪಾವತಿಸಿರುತ್ತಾರೆ ಎಂದು ತಿಳಿಸಿರುತ್ತೇನೆ. ಅದಕ್ಕೆ ಸಂಬಂಧಿಸಿದ ದೃಢೀಕೃತ ರಶೀದಿಯನ್ನು ನಾನು ಎಸಿಬಿ ಪೊಲೀಸರಿಗೆ

ನೀಡಿರುತ್ತೇನೆ. ನಾನು ನೀಡಿದ ಪತ್ರ ಮತ್ತು ರಶೀದಿಗಳನ್ನು ಈಗ ನೋಡುತ್ತಿದ್ದು, ಅದನ್ನು ಒಟ್ಟಾಗಿ ನಿ.ಪಿ.91 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ.ವಿ.ಹೆಚ್. ರವರ ಪರವಾಗಿ ಶ್ರೀ ಎನ್.ಪಿ.ಹೆಚ್. ವಕೀಲರಿಂದಃ

3. ರೂ.11.875/- ಶುಲ್ಕವನ್ನು ಕು| ಚೈತ್ರಾ ರವರು ನಮ್ಮಲ್ಲಿ ಪಾವತಿಸಿಲ್ಲ, ಬದಲಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪಾವತಿಸಿರುತ್ತಾರೆ ಎಂದರೆ ಸರಿ. ಮಂಗಳೂರು ವಿಶ್ವವಿದ್ಯಾನಿಲಯದ ಲೆಕ್ಕಪತ್ರ ವಿಭಾಗದ ವಿವರ ನೀಡಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.